## ಸೀಮೆ ಎಣ್ಣೆ

ಪದವಿ ಕಲಿಯುವ ಸಮಯದಲ್ಲಿ ಆದ ಘಟನೆ.ಆಗ ನಾವು ಕಲಬುರಗಿಯಲ್ಲಿ ರೂಮ್ ಮಾಡಿದ್ದೆವು. ಅಡಿಗೆ ಮಾಡಲು ಸೀಮೆ ಎಣ್ಣೆ ಸ್ಟೌ ಇತ್ತು. ಸೀಮೆ ಎಣ್ಣೆಯನ್ನು ಊರಿಂದ ತರುತ್ತಿದ್ದೆವು. ಸಾರಿಗೆ ಬಸ್ಸುಗಳಲ್ಲಿ ಸೀಮೆ ಎಣ್ಣೆ ತರುವುದು ನಿಷೇಧವಿತ್ತು. ಹೇಗೊ ಕದ್ದುಮುಚ್ಚಿ ತರಬೇಕಿತ್ತು. ಆದಿನ ಅಂಜಿಕೆಯಿಂದಲೇ ಬೆಳಗಿನ ಜಾವದ ಬಸ್ಸಿಗೆ ಹೊರಟಿದ್ದೆ, ಬ್ಯಾಗಿನ ಜೊತೆ ಸೀಮೆ ಎಣ್ಣೆಯ ಡಬ್ಬಿಯೂ ಇತ್ತು. ನನ್ನ ಗ್ರಹಚಾರಕ್ಕೆ ಬಸ್ಸಿನ ವೇಗಕ್ಕೆ ಡಬ್ಬಿ ಸ್ವಲ್ಪ ಸೋರಿ, ವಾಸನೆ ಬರಹತ್ತಿತು. ಟಿಕೆಟ್ ತೆಗೆದು ಮುಗಿಸಿದ ಮೇಲೆ ಕಂಡಕ್ಟರ್ ಬಂದು ನನ್ನ ಪಕ್ಕದಲ್ಲೇ ಕುಳಿತುಕೊಳ್ಳಬೇಕೆ! ಸೀಮೆ ಎಣ್ಣೆ ವಾಸನೆ ಅವರನ್ನು ತಟ್ಟಿತು. 'ಏನ್ರಿ? ಸೀಮೆ ಎಣ್ಣೆ ಸೋರ್ತಾ ಇದೆ?' ಅಂದರು. ನನ್ನ ಜಂಘಾಬಲವೇ ಉಡುಗಿಹೋಯಿತು. 'ಇಲ್ಲ ಸರ್' ಅಂತ ತಲೆ ಅಲ್ಲಾಡಿಸಿದೆ. ಅವರು 'ಅದು ಸೀಮೆ ಎಣ್ಣೆನೆ ಅಲ್ವಾ? ಸೋರ್ತಾ ಇದೆ. ಮುಚ್ಚಳವನ್ನು ಭದ್ರವಾಗಿ



ಮುಚ್ಚೋದಲ್ವಾ? ಅದನ್ನ ಮೊದಲು ಟೈಟ್ ಮಾಡಿ' ಎಂದು ಎಚ್ಚರಿಸಿದರು. ಇಳಿಯುವಾಗ ಕಂಡಕ್ಟರ್ ಸಾಹೇಬರಿಗೆ ಧನ್ಯವಾದ ತಿಳಿಸಿದೆ.

**ನರಸಿಂಹಾರೆಡ್ಡಿ ಯಂಕಾಮೋಳ**



## ಬ್ಯಾಂಕಿನವರು...

ಬ್ಯಾಂಕಿನ ಶಾಖೆಯೊಂದರಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದಾಗ ನಮ್ಮ ಕ್ಷೇತ್ರಾಧಿಕಾರಿಯ ಜೊತೆ ಒಂದು ಹಳ್ಳಿಗೆ ಸಾಲ ವಸೂಲಾತಿಗೆ ಹೋಗಿದ್ದೆ. ಒಂದು ಮನೆಯ ಎದುರಿನಲ್ಲಿ ಹೆಣ್ಣು ಮಗುವೊಂದು ಆಟವಾಡುತ್ತಿತ್ತು. ಆ ಮಗುವಿಗೆ 'ನಿಮ್ಮ ತಂದೆ ಮನೆಯಲ್ಲಿ ಇದ್ದಾರೇನಮ್ಮಾ?' ಎಂದು ಕೇಳಿದೆವು. ಆಗ ಮಗು, 'ಇಲ್ಲಾ, ನಮ್ಮಪ್ಪ ಪೇಟೆಗೆ ಹೋಗಿದ್ದಾರೆ, ನೀವ್ಯಾರು' ಎಂದಿತು. 'ನಾವು ಬ್ಯಾಂಕಿನವರು ಪುಟ್ಟಾ, ನಿಮ್ಮಮ್ಮ ಮನೆಯಲ್ಲಿ ಇದ್ದಾರಾ?' ಎಂದಾಗ ಆ ಮಗು, 'ಅಮ್ಮಾ ಸ್ನಾನಕ್ಕೆ ಹೋಗಿದ್ದಾರೆ' ಎಂದು ಹೇಳಿತು. ನಮ್ಮ ಸಂಭಾಷಣೆ ಒಳಗಿದ್ದ ಅವರಮ್ಮನಿಗೆ ಕೇಳಿಸಿರಬೇಕು. ಆಕೆ ಒಳಗಿನಿಂದಲೇ ಕೂಗಿ ಕೇಳಿದರು, 'ಯಾರೇ ಅದು, ಗಂಡಸರೇನೇ?' ಅದಕ್ಕೆ ಆ ಮಗು, 'ಅಲ್ಲಮ್ಮಾ, ಬ್ಯಾಂಕಿನೋರಂತೆ!' ಎನ್ನೋದೇ!

**ಎಲ್.ಆರ್. ಚಂದ್ರಶೇಖರ್**